**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 24.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಬಿ.ವಿ.ಎಸ್. ವಕೀಲರಿಂದಃ**

ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ಸ.ನಂ. 68/8 ರ ಆಸ್ತಿಗೆ ಸಂಬಂಧಪಟ್ಟಂತೆ ಶಾಶ್ವತ ತಡೆಯಾಜ್ಞೆ ಕೋರಿ ಈ ದಾವೆ ಮಾಡಿರುತ್ತೇನೆ. ದಾವಾ ಸ್ವತ್ತು ತಮಗೆ ಹೇಗೆ ಬಂದಿರುತ್ತದೆಂದು ಕೇಳಲಾಗಿ ಸಾಕ್ಷಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನನ್ನ ತಾತ ನನ್ನ ತಂದೆಗೆ ಮತ್ತು ನನ್ನ ತಂದೆ ನನಗೆ ಕೊಟ್ಟಿರುತ್ತಾರೆ. ನಮ್ಮ ತಂದೆಗೆ ನಾನು ಸೇರಿ ಒಟ್ಟು 05 ಜನ ಮಕ್ಕಳು. ನಮ್ಮ ತಂದೆಯ ಆಸ್ತಿಯನ್ನು ಮಕ್ಕಳುಗಳಾದ ನೀವು ವಿಭಾಗ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಿಭಾಗ ಪತ್ರ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಹಾಜರುಮಾಡಿರುತ್ತೇನೆಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ತಂದೆ ಕೆಂಪೇಗೌಡ ಮತ್ತು ನನ್ನ ತಂದೆ ಹೆತ್ತೇಗೌಡ ಅಣ್ಣ-ತಮ್ಮಂದಿರು ಎಂದರೆ ಸರಿ. ದಿನಾಂಕಃ 31.05.2016 ರಂದು ದಾವಾ ಆಸ್ತಿಯು ವಿಭಾಗದ ಮೂಲಕ ಬಂದಿರುತ್ತದೆಂದು ತಾವು ಹೇಳಿದ್ದು ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡದಿದ್ದರೂ ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಪತ್ರದಲ್ಲಿ ಹತ್ತಿ ಮತ್ತು ತರಕಾರಿ ಬೆಳೆಗಳನ್ನು ಬೆಳೆದಿದ್ದು, ಪ್ರತಿವಾದಿಯರು ನಾಶಪಡಿಸಿರುತ್ತಾರೆಂದು ಹೇಳಿದ್ದು, ಫೋಟೋ ಏನಾದರೂ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಫೋಟೋ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ದಾವೆ ಹೂಡುವ ಕಾಲಕ್ಕೆ ದಾವಾ ಷೆಡ್ಯೂಲ್-ಎ ಸ್ವತ್ತಿನಲ್ಲಿ ಯಾವುದೇ

ತರಕಾರಿ ಮತ್ತು ಹತ್ತಿ ಬೆಳೆದಿರಲಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆಂದು ತಾವು ಹೇಳಿದ್ದು, ಯಾವ ದಿನಾಂಕ, ತಿಂಗಳು ಮತ್ತು ವರ್ಷ ಎಂದು ಕೇಳಲಾಗಿ ಸಾಕ್ಷಿಯು ದಿನಾಂಕ ನೆನಪಿಲ್ಲ ಆದರೆ ಸುಮಾರು 04 ವರ್ಷಕಳ ಹಿಂದೆ ಎಂದು ನುಡಿಯುತ್ತಾರೆ. ಅತಿಕ್ರಮ ಪ್ರವೇಶ ಮಾಡದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಗ್ರಾಮದಲ್ಲಿ ಪಂಚಾಯಿತಿ ಆಗಿರುತ್ತದೆಂದು ತಾವು ಹೇಳಿದ್ದು, ಯಾವ ದಿನಾಂಕ, ತಿಂಗಳು ಮತ್ತು ವರ್ಷ ಎಂದು ಕೇಳಲಾಗಿ ಸಾಕ್ಷಿಯು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಸ.ನಂ. 5/2 ರ ಜಮೀನಿನಲ್ಲೂ ನಾನು ಸ್ವಾಧೀನ ಇರುತ್ತೇನೆಂದರೆ ಸರಿ. 1 ನೇ ಪ್ರತಿವಾದಿಯ ತಂದೆ ಸ.ನಂ. 5/2 ರ ಜಮೀನಿನಲ್ಲಿ ಸ.ನಂ. 5/4 ರ ಜಮೀನಿಗೆ ಹೋಗಲು ನನ್ನ ತಂದೆ 15 ಅಡಿ ಅಗಲ, 100 ಅಡಿ ಉದ್ದದ ಜಾಗ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯರು ಸ.ನಂ. 68/4 ರ ಜಮೀನಿಗೆ ನಾವು ಹೋಗಲು ಸ.ನಂ. 68/1 ರಲ್ಲಿ 12 ಅಡಿ ಅಗಲ, 30 ಅಡಿ ಉದ್ದದ ಜಾಗ ಬಿಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಬೇರೆ ಕಡೆ ಬಿಟ್ಟಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆ ಬದುಕಿದ್ದಾಗ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ನಡುವೆ ರಸ್ತೆಗೆ ಜಾಗ ಬಿಡಲು ಈ ಮೇಲೆ ಹೇಳಿದಂತೆ ಒಪ್ಪಂದ ಆಗಿತ್ತು ಎಂದರೆ ಸರಿಯಲ್ಲ. ಸ.ನಂ. 68/4 ರ ಜಮೀನಿಗೆ ಹೋಗಲು ಪ್ರತಿವಾದಿಯರಿಗೆ ನಾವು ತೊಂದರೆ ಕೊಟ್ಟಿದ್ದರಿಂದ ಪ್ರತಿವಾದಿಯರು ನನ್ನ ವಿರುದ್ಧ ಅಸಲು ದಾವಾ ನಂ. 123/2020 ಎಂದು ದಾವೆ ಮಾಡಿದ್ದರು ಎಂದರೆ ಸಾಕ್ಷಿಯು ನಾನು ತೊಂದರೆ ಕೊಟ್ಟಿಲ್ಲ, ಅಲ್ಲಿ ರಸ್ತೆ ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ತಮ್ಮ ದಾವಾ ಪತ್ರದಲ್ಲಿ

ಪ್ರತಿವಾದಿಯರು ತಮ್ಮ ವಿರುದ್ಧ ತಾವು ದಾವೆ ಹೂಡುವ ಮೊದಲೇ ದಾವೆ ಮಾಡಿದ್ದನ್ನು ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ಸ.ನಂ. 68/8 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 01 ಎಕರೆ 03 ಗುಂಟೆ ಎಂದು ಹೇಳಿ, 01 ಎಕರೆ 03 ಗುಂಟೆ ಪೈಕಿ 03 ಗುಂಟೆಯನ್ನು ಲತಾ ಕೋಂ ಬಸಪ್ಪರವರಿಗೆ ಮಾರಾಟ ಮಾಡಿರುತ್ತೇನೆ, ಇನ್ನು 01 ಗುಂಟೆ ದಾಖಲೆಗಳಲ್ಲಿ ನಮೂದಾಗುತ್ತಿಲ್ಲ, ಹಾಗಾಗಿ ನಾನು 39 ಗುಂಟೆಗೆ ದಾವೆ ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ಲತಾರವರಿಗೆ ಮಾರಾಟ ಮಾಡಿರುವ ಕ್ರಯ ಪತ್ರದಲ್ಲಿ ಉತ್ತರ ದಿಕ್ಕಿಗೆ 12 ಅಡಿ ಅಗಲದ ರಸ್ತೆ ಇದೆ ಎಂದು ಬರೆಸಿರುತ್ತೇನೆಂದರೆ ಸಾಕ್ಷಿಯು ಸದರಿ ಲತಾರವರಿಗೆ 03 ಗುಂಟೆ ಕೊಡುವಾಗ ಸರ್ಕಾರಿ ರಸ್ತೆಯ ಪಕ್ಕದಲ್ಲಿ ಬೇಲಿ ಬೆಳೆದುಕೊಂಡಿತ್ತು ಆ ಬೇಲಿಯನ್ನು ಸೇರಿಸಿ ರಸ್ತೆ ಎಂದು ತೋರಿಸಿದ್ದೆ ಆದರೆ ಅಳತೆ ಮಾಡಿಸಿ ನೋಡಿದಾಗ ಸದರಿ ಬೇಲಿ ಇದ್ದ ಜಾಗ ನನ್ನ ವ್ಯಾಪ್ತಿಗೆ ಬಂದಿರುತ್ತದೆಂದು ನುಡಿಯುತ್ತಾರೆ. ಪಶ್ಚಿಮ ದಿಕ್ಕಿಗೆ ಸರ್ಕಾರಿ ರಸ್ತೆ ಎಂದು ಕ್ರಯ ಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿ. ಉತ್ತರ ದಿಕ್ಕಿಗೆ 12 ಅಡಿ ರಸ್ತೆಯು ಪ್ರತಿವಾದಿಯರು ತಮ್ಮ ಜಮೀನಿಗೆ ಹೋಗುವ ರಸ್ತೆ ಇದ್ದರೂ, ರಸ್ತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 39 ಗುಂಟೆ ಜಮೀನಿನಲ್ಲಿ ನಾನು ಸ್ವಾಧೀನ ಇದ್ದು, 01 ಗುಂಟೆ ಜಾಗಕ್ಕೆ ಪ್ರತಿವಾದಿಯರು ತೊಂದರೆ ಕೊಟ್ಟಿದ್ದರಿಂದ ಆ 01 ಗುಂಟೆ ಜಮೀನಿಗೆ ನಾನು ದಾವೆ ಮಾಡಿರುತ್ತೇನೆ. ದಾವಾ ಷೆಡ್ಯೂಲ್-ಬಿ ಸ್ವತ್ತಿಗೆ ಪ್ರತಿವಾದಿಯರು ತೊಂದರೆ ಕೊಡದಿದ್ದರೂ ತೊಂದರೆ ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಷೆಡ್ಯೂಲ್-ಎ ಸ್ವತ್ತಿನಲ್ಲಿ 35 ಗುಂಟೆ ಜಮೀನನ್ನು ಪ್ರಸ್ತುತ ನನ್ನ ಹೆಂಡತಿಯ ಹೆಸರಿಗೆ ಖಾತೆ ಮಾಡಿಸಿರುತ್ತೇನೆ, ಇನ್ನುಳಿಕೆ 05 ಗುಂಟೆ

ಜಮೀನನ್ನು ಪದ್ಮಿನಿ ಎಂಬುವವರಿಗೆ ಮಾರಾಟ ಮಾಡಿರುತ್ತೇನೆ. ದಾವಾ ಬಿ-ಷೆಡ್ಯೂಲ್ ಸ್ವತ್ತಿನಲ್ಲಿರುವ 01 ಗುಂಟೆ ಜಮೀನನ್ನು ಖಾತೆ ಮಾಡಿಸಿಕೊಳ್ಳಲು ಈ ದಾವೆ ತಂದಿರುತ್ತೇನೆ. 01 ಎಕರೆ 03 ಗುಂಟೆ ಪೈಕಿ 03 ಗುಂಟೆ ಜಮೀನನ್ನು ಲತಾರವರಿಗೆ ಮಾರಾಟ ಮಾಡಿ, ಇನ್ನುಳಿಕೆ 40 ಗುಂಟೆ ಪೈಕಿ 35 ಗುಂಟೆ ಜಮೀನನ್ನು ತಮ್ಮ ಹೆಂಡತಿ ಹೆಸರಿಗೆ ಮಾಡಿಕೊಟ್ಟಿದ್ದು, ಇನ್ನುಳಿಕೆ 05 ಗುಂಟೆ ಜಮೀನನ್ನು ಪದ್ಮಿನಿರವರಿಗೆ ಕ್ರಯ ಮಾಡಿರುವುದರಿಂದ ಸದರಿ ದಾವಾ ಷೆಡ್ಯೂಲ್ ಸ.ನಂ. ನಲ್ಲಿ ತಮಗೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ. ದಾವೆ ಹೂಡುವ ಕಾಲಕ್ಕೆ ತಮ್ಮ ಹೆಂಡತಿ ಹೆಸರಿಗೆ 35 ಗುಂಟೆಗೆ ದಾನ ಪತ್ರ ಮಾಡಿರಲಿಲ್ಲ ಮತ್ತು 05 ಗುಂಟೆ ಪದ್ಮಿನಿಯವರಿಗೆ ಮಾಡಿರಲಿಲ್ಲ ಎಂದರೆ ಸರಿ. ದಾವೆ ಹೂಡಿದ ನಂತರ ಸದರಿ ಮಾರಾಟ ಮತ್ತು ದಾನ ಪತ್ರ ಮಾಡಿರುವ ಬಗ್ಗೆ ತಿದ್ದುಪಡಿ ಪತ್ರ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು ನನ್ನ ಆರೋಗ್ಯ ಸರಿ ಇಲ್ಲದ ಕಾರಣ 35 ಗುಂಟೆ ಜಮೀನನ್ನು ನನ್ನ ಹೆಂಡತಿ ಹೆಸರಿಗೆ ದಾನ ಪತ್ರ ಮಾಡಿರುತ್ತೇನೆಂದು ನುಡಿಯುತ್ತಾರೆ. ದಾವಾ ಆಸ್ತಿಗೆ ನಾನು ಪ್ರಸ್ತುತ ಖಾತೆದಾರನಾಗಿಲ್ಲದೇ ಇರುವುದರಿಂದ ಈ ದಾವೆಯಲ್ಲಿ ಕೇಳಿದ ಹಕ್ಕನ್ನು ಪಡೆಯಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 68/4 ರ ಜಮೀನಿನಲ್ಲಿ ಪ್ರತಿವಾದಿಯರು ಓಡಾಡದಂತೆ ತಕರಾರು ಮಾಡಿದ್ದರಿಂದ ಪ್ರತಿವಾದಿಯರು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಪಿರ್ಯಾದು ಕೊಟ್ಟಿದ್ದರಿಂದ ಸಿ.ಆರ್.ನಂ. 15/2020 ಎಂದು ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆಂದರೆ ಸರಿ. ಪ್ರಥಮ ವರ್ತಮಾನ ವರದಿಯ ಮೇಲೆ ಪೋಲೀಸರು ಅಂತಮ ವರದಿ ಸಲ್ಲಿಸಿದ್ದರಿಂದ ನ್ಯಾಯಾಲಯಕ್ಕೆ ಸಿ.ಸಿ. ಕೇಸು ಎಂದು ದಾಖಲಾಗಿ ಸದರಿ ಕೇಸಿನಲ್ಲಿ ನಾವು

ರಾಜಿ ಮಾಡಿಕೊಂಡಿರುತ್ತೇವೆಂದರೆ ಸಾಕ್ಷಿಯು ಯಾವುದೇ ಆಸ್ತಿಯ ಸಂಬಂಧಕ್ಕಲ್ಲಾ ಬದಲಾಗಿ ಗಲಾಟೆಯ ಸಂಬಂಧವಾಗಿ ರಾಜಿ ಮಾಡಿಕೊಂಡಿರುತ್ತೇವೆಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಆಸ್ತಿಗೆ ತೊಂದರೆ ಕೊಟ್ಟಿಲ್ಲ, ಬದಲಾಗಿ ಅವರು ಹೂಡಿರುವ ದಾವೆಗೆ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**